# ಕನ್ನಡ ಸ್ವರಗೀತೆ

■ ಬಾಪು ಗ.ಖಾಡೆ, ಮುಧೋಳ

ಅಭಯನು ಅಂದು
ಆಗಸ ನೋಡುತ
ಇರುಳಿನ ಚಂದಿರ ದಿಟ್ಟಿಸಿದ
ಈಗಲೇ ಚಂದ್ರನ ತಂದುಕೊಡೆಂದು
ಉಣ್ಣದೆ ತಿನ್ನದೆ ಹಟ ಹಿಡಿದ
ಊಟವ ಮಾಡದ ತಮ್ಮನ ನೋಡಿ
ಋತ್ವಿಕ್ ಐಶು ಅಮ್ಮನ ಕೂಗಿ
ಎಲ್ಲರೂ ತಮ್ಮನ ರಮಿಸಲು ಆಗದೆ
ಏನು ಮಾಡಬೇಕೆಂದು ಯೋಚಿಸಲು
ಐಶು ಪುಟ್ಟಿಗೆ ಉಪಾಯ ಹೊಳೆಯಲು
ಒಮ್ಮೆಲೆ ಅಡಿಗೆ ಮನೆಕಡೆ ಹೋಗಿ
ಓಡುತ ತಟ್ಟೆಗೆ ನೀರನು ಸುರುವಿ
ಔದಾರ್ಯದ ಅಮ್ಮನ ಕೈಗಿಡಲು
ಅಂದದ ಚಂದ್ರನ ಬಿಂಬವ ತೋರಲು
ಅಃ ಎನ್ನುತ ಮಗು ಕುಣಿದಿರಲು ■


ವಿಜಯಕುಮಾರಿ

# ತರಕಾರಿ...

■ ಮಹಾಂತೇಶ ಮಾಗನೂರ

ಅಪ್ಪನ ಜೊತೆಗೆ ಹೋಗುವೆ
ತರುವೆ ನಾನು ತರ ತರ ತರಕಾರಿ
ತಿಂದರೆ ದೇಹಕೆ ಒಳ್ಳೆಯದು
ಆರೋಗ್ಯಕ್ಕೆ ಬಲು ಸಹಕಾರಿ

ಮುಳ್ಳು ಮುಳ್ಳಿನ ಬದನೆಕಾಯಿ
ಚೋಟುದ್ದದ ಮೆಣಸಿನಕಾಯಿ
ತಿನ್ನಲು ರುಚಿಕರ ಸವತೇಕಾಯಿ
ಬೇಡ ಕಹಿ ಕಹಿ ಹಾಗಲಕಾಯಿ

ನೆಲದಡಿ ಬೆಳೆಯುವ ಗಜ್ಜರಿ
ತಿಂದರೆ ಆರೋಗ್ಯ ಭರ್ಜರಿ
ಹಾವಿನ ಬಣ್ಣದ ಪಡವಲಕಾಯಿ
ಬೂದು ಬಣ್ಣದ ಕುಂಬಳಕಾಯಿ

ಬೆರಳು ಉದ್ದದ ಬೆಂಡೆಕಾಯಿ
ಮೊಳ ಉದ್ದದ ನುಗ್ಗೆ ಕಾಯಿ
ತಿನ್ನಲು ಬಲು ರುಚಿ ಸಿಹಿ ಗೆಣಸು
ಸ್ವಲ್ಪ ಖಾರ ಕರಿ ಮೆಣಸು

ಪಲ್ಯಕ್ಕೆ ಬೇಕು ಉಳ್ಳಾಗಡ್ಡಿ
ಕುರುಕುಲು ತಿಂಡಿಗೆ ಆಲೂಗಡ್ಡೆ
ಮೆದುಳಿನ ಹಾಗೆ ಹೂ ಕೊಸು
ಪದರು ಪದರಿನ ಎಲೆಕೋಸು

ಎಲ್ಲದರಲ್ಲುಂಟು ಔಷಧಿ ಗುಣ
ತಿನ್ನೋಣ ನಾವು ಪ್ರತಿದಿನ!


ವಿಜಯಕುಮಾರಿ